# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 310
2. ಸದಸ್ಯರ ಹೆಸರು : ಶ್ರೀ ಎಂ.ನಾರಾಯಣಸ್ವಾಮಿ
3. ಉತ್ತರಿಸಬೇಕಾದ ದಿನಾಂಕ : 16.07.2019
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಸಚಿವರು.

| ಕ್ರ.ಸಂ | ಪ್ರಶ್ನೆಗಳು: | ಉತ್ತರಗಳು: |
|---|---|---|
| ಅ | ಆನೇಕಲ್ ತಾಲ್ಲೂಕಿನ 62 ಕೆರೆಗಳಿಗೆ ನೀರು ತುಂಬಿಸುವ ಕಾರ್ಯ ಯಾವ ಹಂತದಲ್ಲಿದೆ. | ಬೆಂಗಳೂರು ನಗರದ ಕೆ ಮತ್ತು ಸಿ ವ್ಯಾಲಿಯ ಸಂಸ್ಕರಣಾ ಘಟಕದಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಮೂಲಕ ಆನೇಕಲ್ ತಾಲ್ಲೂಕಿನ 69 ಕೆರೆಗಳನ್ನು ಕನಕಪುರ ತಾಲ್ಲೂಕಿನ ರಾವುತನಹಳ್ಳ ಕೆರೆ ಮತ್ತು ಮಾವತ್ತೂರು ಕೆರೆಗಳನ್ನು ತುಂಬಿಸುವ ಯೋಜನೆಯ ಪಂಪ್‌ಹೌಸ್ ಕಾಮಗಾರಿ ಪ್ರಗತಿಯಲ್ಲಿದೆ, ರೈಸಿಂಗ್ ಮೇನ್‌ನ ಒಟ್ಟು 97.09ಕಿ.ಮೀ. ಉದ್ದದಲ್ಲಿ 49ಕಿ.ಮೀ ಎಂ.ಎಸ್ ಮತ್ತು 21.00ಕಿ.ಮೀ ಎಚ್.ಡಿ. ಪಿ. ಇ ಪೈಪ್‌ಗಳನ್ನು ಅಳವಡಿಸಲಾಗಿದೆ. ಇಲ್ಲಿಯವರೆಗೆ ಶೇ:72% ಕಾಮಗಾರಿಯು ಪೂರ್ಣಗೊಂಡಿರುತ್ತದೆ. |
| ಆ | ಈ ಯೋಜನೆಯ ಒಟ್ಟು ವೆಚ್ಚ ಎಷ್ಟು; ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆಗೊಂಡಿದೆ. | ಸದರಿ ಯೋಜನೆಯನ್ನು ಟರ್ನ್‌ಕೀ ಆಧಾರದ ಮೇಲೆ ರೂ.260.61 ಕೋಟಿಗಳಿಗೆ ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಇಲ್ಲಿಯವರೆವಿಗೂ ಈ ಯೋಜನೆಗೆ ಒಟ್ಟು 161.39ಕೋಟಿಗಳು ವೆಚ್ಚವಾಗಿರುತ್ತದೆ. |
| ಇ | ಈ ಯೋಜನೆ ಯಾವಾಗ ಪ್ರಾರಂಭವಾಯಿತು ಮತ್ತು ಮುಕ್ತಾಯಗೊಳ್ಳುವುದು ಯಾವಾಗ; | ಈ ಯೋಜನೆಯು ದಿ:10.07.17ರಂದು ಪ್ರಾರಂಭವಾಗಿರುತ್ತದೆ. ದಿ:08.03.2020 ರಂದು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. |
| | ಈ ಯೋಜನೆಯು ಮಂದಗತಿಯಲ್ಲಿ ಸಾಗಲು ಸರ್ಕಾರಕ್ಕಿರುವ ಅಡೆತಡೆಗಳೇನು? | ಸದರಿ ಕಾಮಗಾರಿಯಲ್ಲಿ ಅಳವಡಿಸಬೇಕಾಗಿರುವ ಪೈಪ್‌ಲೈನ್‌ಗೆ ಅಡ್ಡವಾಗಿ ನಗರ ಮಿತಿಯಲ್ಲಿ ಬರುವ ವಿದ್ಯುಚ್ಛಕ್ತಿ ಕೇಬಲ್, ನೀರು ಮತ್ತು ಒಳಚರಂಡಿ ಪೈಪ್‌ಲೈನ್, ಹಾಗೂ ಇತರೆ ಉಪಯುಕ್ತತೆಯ ಕೇಬಲ್‌ಗಳು ಇರುವುದರಿಂದ ವಿವಿಧ ಇಲಾಖೆಯಿಂದ ಅನುಮತಿ ಪಡೆದು, ಪೈಪ್‌ಲೈನ್‌ನ್ನು ಅಳವಡಿಸುವ ಕಾರ್ಯದಲ್ಲಿ ತಡವಾಗಿರುತ್ತದೆ. |

ಕಡತ ಸಂಖ್ಯೆ: ಸನೀಇ 16 LCQ 2019

(ಸಿ.ಎಸ್. ಪುಟ್ಟರಾಜು)
ಸಣ್ಣ ನೀರಾವರಿ ಸಚಿವರು.